# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 2014 |
| ಸದಸ್ಯರ ಹೆಸರು: | ಶ್ರೀ ಬಸನಗೌಡ ಬಾದರ್ಲಿ |
| ಉತ್ತರಿಸಬೇಕಾದ ದಿನಾಂಕ: | 25.03.2026 |
| ಉತ್ತರಿಸಬೇಕಾದ ಸಚಿವರು: | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

*********

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಸಿಂಧನೂರು ತಾಲ್ಲೂಕಿನ ಮುಜರಾಯಿ ಇಲಾಖೆಯ ಅಧೀನದಲ್ಲಿ ಬರುವ ಪುರಾತನ ದೇವಾಲಯಗಳ ಸಂಖ್ಯೆ ಎಷ್ಟು: (ವಿವರ ನೀಡುವುದು)</td><td>ಸಿಂಧನೂರು ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆಯ ಅಧೀನದಲ್ಲಿ 8 ಪುರಾತನ ದೇವಾಲಯಗಳು ಇರುತ್ತವೆ. ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ. ಸದರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಟ್ಟು 392 ಮುಜರಾಯಿ ದೇವಾಲಯಗಳು ಇರುತ್ತವೆ.</td></tr>
<tr><td>(ಆ)</td><td>ಸದರಿ ದೇವಾಲಯಗಳು ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿವೆಯೇ:</td><td>ದೇವಸ್ಥಾನಗಳು ಸಿಂಧನೂರು ತಾಲ್ಲೂಕಿನ ಮುಜರಾಯಿ ಇಲಾಖಾ ವ್ಯಾಪ್ತಿಯಡಿ ಬರುವ ಪುರಾತನ ದೇವಸ್ಥಾನಗಳ ಮಾಹಿತಿಯನ್ನು ಅನುಬಂಧ-01ರಲ್ಲಿ ಒದಗಿಸಿದೆ. ಸದರಿ ದೇವಸ್ಥಾನಗಳು ಮೂಲಭೂತ ಸೌಕರ್ಯಗಳು ಹೊಂದಿರುತ್ತವೆ.<br><br>ಮುಂದುವರೆದು, ಸಿಂಧನೂರು ತಾಲ್ಲೂಕಿನ ಪ್ರವರ್ಗ 'ಎ' ಪುರಾತನ ದೇವಸ್ಥಾನವಾದ ಶ್ರೀ ಅಂಬಾದೇವಿ ದೇವಸ್ಥಾನ ಸೋಮಲಾಪುರ ಗ್ರಾಮ ಈ ದೇವಾಲಯದ 2024-25ನೇ ಸಾಲಿನ ವಾರ್ಷಿಕ ಆದಾಯವು ರೂ.189.99 ಲಕ್ಷಗಳಾಗಿರುತ್ತದೆ. ಈ ದೇವಾಲಯದಲ್ಲಿ ಭಕ್ತಾದಿಗಳಿಗೆ ಅವಶ್ಯಕವಿರುವ ಅಗತ್ಯ ಮೂಲಭೂತ ಸೌಕರ್ಯಗಳಾದ ಸಿ.ಸಿ ಕ್ಯಾಮರಾ, ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.<br><br>ದೇವಾಲಯದ ಗರ್ಭಗುಡಿಯ ಹೊರಪ್ರಾಂಗಣ ಸುತ್ತಲೂ ಹೊಸದಾಗಿ ಕಲ್ಲಿನ ಶಿಲಾಮಂಟಪವನ್ನು ನಿರ್ಮಾಣ ಮಾಡಲು ರೂ.793.50 ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಸರ್ಕಾರದ ಆದೇಶ ಸಂಖ್ಯೆ:ಕಂಇ 07 ಮುಅಕಾ 2021 ದಿನಾಂಕ.08.11.2021 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಯು ಅಂತಿಮ ಹಂತದಲ್ಲಿರುತ್ತದೆ.</td></tr>
<tr><td>(ಇ)</td><td>ತಾಲ್ಲೂಕಿನ ಸದರಿ ಪುರಾತನ ದೇವಾಲಯಗಳ ಸಂರಕ್ಷಣೆಗೆ ಸರ್ಕಾರದಿಂದ ಯಾವ ಕ್ರಮವಹಿಸಲಾಗಿದೆ;</td><td>ಕಳೆದ ಮೂರು ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿನಲ್ಲಿರುವ ಮುಜರಾಯಿ ಮತ್ತು ಮುಜರಾಯೇತರ ಸಂಸ್ಥೆಗಳಿಗೆ ಈ ಕೆಳಕಂಡ ವಿವಿಧ ಯೋಜನೆಗಳಡಿ ರೂ.91.59 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.
<table>
<tr><th>ಕ್ರ.ಸಂ</th><th>ಯೋಜನೆ ಹೆಸರು</th><th>2023-24</th><th>2024-25</th><th>2025-26</th><th>ಒಟ್ಟು</th></tr>
<tr><td colspan="6">(ರೂ.ಲಕ್ಷಗಳಲ್ಲಿ)</td></tr>
<tr><td>1.</td><td>ದುರಸ್ತಿ/ಜೀರ್ಣೋದ್ಧಾರ/ನಿರ್ಮಾಣ</td><td>70.00</td><td>0.00</td><td>0.00</td><td>70.00</td></tr>
<tr><td>2.</td><td>ಆರಾಧನಾ ಯೋಜನೆ</td><td>2.23</td><td>2.23</td><td>2.23</td><td>6.69</td></tr>
<tr><td>3.</td><td>ಪರಿಶಿಷ್ಟ ಜಾತಿ ಉಪಯೋಜನೆ</td><td>2.23</td><td>2.23</td><td>2.23</td><td>6.69</td></tr>
<tr><td>4.</td><td>ಗಿರಿಜನ ಉಪ ಯೋಜನೆ</td><td>0.53</td><td>0.53</td><td>0.53</td><td>1.59</td></tr>
<tr><td>5.</td><td>ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಪರಿಶಿಷ್ಟ ಜಾತಿ ಉಪಯೋಜನೆಗೆ</td><td>2.31</td><td>0.61</td><td>0.00</td><td>2.92</td></tr>
</table></td></tr>
</table>

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | |

| | | | | | |
|---|---|---|---|---|---|
| 6. | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಗಿರಿಜನ ಉಪ ಯೋಜನೆಗೆ | 3.18 | 0.52 | 0.00 | 3.70 |
| **ಒಟ್ಟು** | | **66.48** | **6.12** | **4.99** | **91.59** |

ರಾಜ್ಯದ ಒಟ್ಟು 25551 ಪ್ರವರ್ಗ 'ಸಿ' ದೇವಾಲಯಗಳಿಗೆ ವಾರ್ಷಿಕ ರೂ.72,000/-ಗಳ ತಸ್ತೀಕ್ ಮೊತ್ತವನ್ನು ಹಾಗೂ ಒಟ್ಟು 3721 ದೇವಾಲಯಗಳಿಗೆ ವಾರ್ಷಿಕ ರೂ.72,000/-ಗಳ ವರ್ಷಾಸನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತಿದ್ದು, ಈ ಮೊತ್ತವು ಪ್ರವರ್ಗ 'ಸಿ' ದೇವಾಲಯಗಳ ವಾರ್ಷಿಕ ಆದಾಯವಾಗಿರುತ್ತದೆ.

ದೇವಸ್ಥಾನಗಳಿಗೆ ಸೇರಿದ ಜಮೀನು ಮತ್ತು ಸ್ವತ್ತುಗಳನ್ನು ಸಂರಕ್ಷಣೆ ಮಾಡಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1. ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ/ ದೇವಾಲಯಕ್ಕೆ ಸೇರಿದ /ಛತ್ರಗಳ ಜಮೀನು ಹಾಗೂ ಇತರ ಆಸ್ತಿಗಳ ಸಂರಕ್ಷಣೆಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅ.ಸ.ಪತ್ರ ಸಂ:ಮುಕಾ/ 1265/ 2020, ದಿನಾಂಕ: 11.12.2020 ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಿ ದೇವಾಲಯದ ಜಮೀನುಗಳನ್ನು ಆದ್ಯತೆ ಮೇರೆಗೆ ಅಳತೆ ಮಾಡಿ ನಕ್ಷೆ ತಯಾರಿಸಲು ಹಾಗೂ ಕನಿಷ್ಠ ತಿಂಗಳಿಗೆ ಒಂದು ತಾಲ್ಲೂಕಿನಲ್ಲಿ 5 ದೇವಾಲಯಗಳ ಆಸ್ತಿಯನ್ನು ಸರ್ವೆ ಮಾಡಿ ದಾಖಲೀಕರಣ ಗೊಳಿಸಿ ವರದಿಯನ್ನು ಸಲ್ಲಿಸಲು ಸಹಾಯಕ ದತ್ತಿ ಸಮೀಕ್ಷಾಧಿಕಾರಿ ಗಳಾಗಿರುವ ಭೂದಾಖಲೆಗಳ ಉಪ ನಿರ್ದೇಶಕರಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ.
2. ಸರ್ಕಾರದ ಪತ್ರ ಸಂಖ್ಯೆ:ಕಂಇ 49 ಮುಅಬಿ 2021. ದಿನಾಂಕ:11.11.2021ರಲ್ಲಿ ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚಿತವಾಗಿರುವ ಧಾರ್ಮಿಕ ಸಂಸ್ಥೆಗಳ/ದೇವಸ್ಥಾನಗಳ ಹೆಸರು, ಅವುಗಳಿಗೆ ಸೇರಿದ ಜಮೀನುಗಳು ಆರ್.ಟಿ.ಸಿಯಲ್ಲಿ ನಮೂದಾಗಿದೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ ಪರಿಶೀಲಿಸಿ ನಮೂದಾಗದೇ ಇದ್ದಲ್ಲಿ ಆರ್.ಟಿ.ಸಿ.ಯಲ್ಲಿ "ದೇವಾಲಯದ ಹೆಸರು" – "ಧಾರ್ಮಿಕ ದತ್ತಿ ಇಲಾಖೆ" ಎಂದು ನಮೂದಿಸುವ ಕಾರ್ಯವನ್ನು ಕಂದಾಯ ತಹಸೀಲ್ದಾರ್ ಮತ್ತು ಕಂದಾಯ ಇಲಾಖೆಯ ಸಿಬ್ಬಂದಿಗಳು ಪೂರ್ಣಗೊಳಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಕಂದಾಯ ಇಲಾಖೆ ರವರು ಜಿಲ್ಲೆಯ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತಾರೆ.
3. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:WP/27/2018(LB-RES)ರ ದಿನಾಂಕ:04.09.2023ರ ತೀರ್ಪಿನಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿರುತ್ತದೆ.

"Learned Additional Government Advocate is also directed to bring the above observations to the notice of the Endowment Commissioner. Who shall inform all the concerned authorities to make necessary entries in the name of the deity whenever any property is transferred to such temple. Either by a government agency or by a private person. All the properties are necessarily to stand in the name of the deity and the managing committee or any other person managing the temple would no have any individual right title or interest in the said property"

4. ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 14.09.2023ರ ತೀರ್ಪಿನಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ:HRICE-LAW0LAW/91/2023 (1203396) ದಿನಾಂಕ:02.11.2023,

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ದಿನಾಂಕ:01.12.2023 ಹಾಗೂ HRICE-LNDOADM3/1/2026-E-2026334 ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರಿಗೆ ಸೂಚನೆ ಯನ್ನು ನೀಡಲಾಗಿರುತ್ತದೆ.<br>5. ಅಧಿಸೂಚಿತ ದೇವಾಲಯಗಳ ಜಮೀನುಗಳ ಸಂರಕ್ಷಣೆಗಾಗಿ ಕೆಲವು ಕಡೆ ಬೇಲಿಗಳನ್ನು ನಿರ್ಮಿಸಲಾಗಿದೆ. ಎಲ್ಲಾ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ ನಿಖರ ಮಾಹಿತಿಗಾಗಿ ಜಿಯೋ ಫೆನ್ಸಿಂಗ್ ಮಾಡಿಸಲು ಪರಿಶೀಲಿಸಲಾಗುತ್ತಿದೆ.<br><br>ದೇವಾಲಯಕ್ಕೆ ಸೇರಿದ ಸ್ವತ್ತುಗಳನ್ನು ಕಾಯ್ದೆಯ ಕಲಂ 31(7)ರಡಿಯಲ್ಲಿ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕ್ರಮವಹಿಸಲಾಗುತ್ತಿದೆ.<br><br>ರಾಜ್ಯದ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿ ಸಂರಕ್ಷಣೆಗಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>1. ಈವರೆವಿಗೆ ರಾಜ್ಯದಲ್ಲಿ 19,020 ಅಧಿಸೂಚಿತ ಮುಜರಾಯಿ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಅಳತೆಯಾಗಿರುತ್ತದೆ.<br>2. ಒಟ್ಟು 20,730 ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳನ್ನು ಖಾತೆ ಮಾಡಿಸಲು ಕ್ರಮವಹಿಸಲಾಗಿದೆ.<br>3. ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಅಕ್ರಮ ಪರಭಾರೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ದೇವಾಲಯಗಳ ಸ್ವತ್ತುಗಳ ಪಹಣಿಗಳನ್ನು ಹಾಗೂ ಖಾತೆಗ ಳನ್ನು Flag ಮಾಡಿಸಲು ಕ್ರಮವಹಿಸಲಾಗಿದೆ.<br>4. ಈವರೆವಿಗೆ ಅಧಿಸೂಚಿತ ದೇವಸ್ಥಾನಗಳ ಒಟ್ಟು 309-32 ಎಕರೆ-ಗುಂಟೆ ಜಮೀನಿನ ಒತ್ತುವರಿ ಯನ್ನು ತೆರವುಗೊಳಿಸಲಾಗಿದೆ.<br>5. ಅಧಿಸೂಚಿತ ದೇವಾಲಯಗಳ ಜಮೀನುಗಳ ಸಂರಕ್ಷಣೆಗಾಗಿ ಕೆಲವು ಕಡೆ ಬೇಲಿಗಳನ್ನು ನಿರ್ಮಿಸಲಾಗಿದೆ. ಎಲ್ಲಾ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ ನಿಖರ ಮಾಹಿತಿಗಾಗಿ ಜಿಯೋ ಫೆನ್ಸಿಂಗ್ ಮಾಡಿ ಸಲು ಪರಿಶೀಲಿಸಲಾಗುತ್ತಿದೆ.<br>6. ಒಟ್ಟು 1800 ಅಧಿಸೂಚಿತ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಸ್ವತ್ತುಗಳನ್ನು ಕಾಯ್ದೆಯ ಕಲಂ 31(7)ರಡಿಯಲ್ಲಿ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.<br>ರಾಜ್ಯದ ಧಾರ್ಮಿಕ ಸಂಸ್ಥೆಗಳ ಆಸ್ತಿ ಸಂರಕ್ಷಣೆಗಾಗಿ 2023ರ ಪೂರ್ವದಲ್ಲಿ ಭೂ ವರಾಹ ಯೋಜನೆ ಅಂತಹ ಯಾವುದೇ ಯೋಜನೆಯು ಜಾರಿಗೆ ಬಂದಿರುವುದಿಲ್ಲ.<br><br>2023ನೇ ಸಾಲಿನ ನಂತರ ಇಲಾಖೆಗೆ ಸೇರಿದ ದೇವಾಲಯಗಳ ಸ್ಥಿರಾಸ್ತಿಗಳ ಸರ್ವೆ ಕಾರ್ಯ/ ದಾಖಲೀಕರಣ/ಒತ್ತುವರಿ ತೆರವು ಜಮೀನುಗಳ ಸಂರಕ್ಷಣೆಯನ್ನು ಪ್ರಮುಖ ಆದ್ಯತೆಯಾಗಿ ಪರಿಗಣಿಸಿಕೊಂಡು ಅದನ್ನು ಕಾರ್ಯ ರೂಪಕ್ಕೆ ತರುವ ನಿಟ್ಟಿನಲ್ಲಿ ಸರ್ಕಾರವು ಆದೇಶ ಸಂಖ್ಯೆ ಕಂಇ 27 ಮುಆಬಿ 2025 ದಿನಾಂಕ: 12-02-2026ರನ್ವಯ ಭೂ-ವರಾಹ ಯೋಜನೆ ಯನ್ನು ಜಾರಿಗೊಳಿಸಲು ಸಚಿವ ಸಂಪುಟದ ಅನುಮೋದನೆಯನ್ನು ಪಡೆದು, ಈ ಯೋಜನೆಗೆ 2025-26ನೇ ಸಾಲಿನಲ್ಲಿ ಒಟ್ಟು ರೂ.1500.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಿರುತ್ತದೆ. |

**ಸಂಖ್ಯೆ:ಕಂಇ 94 ಮುಸಪ್ರ 2026**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

## ಅನುಬಂಧ-01

| ಕ್ರ.ಸಂ: | ತಾಲ್ಲೂಕು | ಪುರಾತನ ದೇವಾಲಯದ ಹೆಸರು: | ಷರಾ: |
|---|---|---|---|
| 01 | ಸಿಂಧನೂರು | ಶ್ರೀ ಅಂಬಾದೇವಿ ದೇವಸ್ಥಾನ, ಸೋಮಲಾಪುರ ಗ್ರಾಮ ("ಎ" ಅಧಿಸೂಚಿತ) | - |
| 02 | | ಶ್ರೀ ರಂಗನಾಥ ಸ್ವಾಮಿ ದೇವಸ್ಥಾನ, ವಾಲಭಲ್ಲಾರಿ ಗ್ರಾಮ ತಾ:ಸಿಂಧನೂರು | - |
| 03 | | ಶ್ರೀ ವೀರಭದ್ರೇಶ್ವರ ದೇವಸ್ಥಾನ, ಉದ್ಬಾಳ ಗ್ರಾಮ ತಾ:ಸಿಂಧನೂರು | - |
| 04 | | ಶ್ರೀ ಈಶ್ವರ ದೇವಸ್ಥಾನ, ಸಿಂಧನೂರು ತಾ:ಸಿಂಧನೂರು | - |
| 05 | | ಶ್ರೀ ಅಡವಿಸಿದ್ದೇಶ್ವರ ದೇವಸ್ಥಾನ, ಸಿಂಧನೂರು ತಾ:ಸಿಂಧನೂರು | - |
| 06 | | ಶ್ರೀ ಹನುಮಾನ ದೇವಸ್ಥಾನ, ವಾಲಭಲ್ಲಾರಿ ಗ್ರಾಮ ತಾ:ಸಿಂಧನೂರು | - |
| 07 | | ಶ್ರೀ ಚನ್ನಬಸವೇಶ್ವರ ದೇವಸ್ಥಾನ, ಚಿಕ್ಕನೂರು ಗ್ರಾಮ ತಾ:ಸಿಂಧನೂರು | - |
| 08 | | ಗೋಪುರ ಬಸವೇಶ್ವರ ದೇವಸ್ಥಾನ, ಉಪ್ಪಳ ಗ್ರಾಮ ತಾ:ಸಿಂಧನೂರು | - |

23/03/2026

ಜಿಲ್ಲಾಧಿಕಾರಿಗಳ ಪರವಾಗಿ
ರಾಯಚೂರು.